

ಭ. ಶ್ರೀ ಪಾರ್ಶ್ವನಾಥಸ್ವಾಮಿ



॥ ಶ್ರೀ ಶಾಂತಿನಾಥಾಯ ನಮಃ ॥
॥ ಶ್ರೀ ಬ್ರಹ್ಮ ಯಕ್ಷಾಯ ನಮಃ ॥



॥ ಭಗವಾನ್ ಶ್ರೀ ಪಾರ್ಶ್ವನಾಥಾಯ ನಮಃ ॥



॥ ಶ್ರೀ ಬಾಹುಬಲಿ ಸ್ವಾಮಿನೇ ನಮಃ ॥



॥ ಯಕ್ಷಿ ಶ್ರೀ ಪದ್ಮಾವತಿ ದೇವಿಯೇ ನಮಃ ॥

# ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠ – ಗುಡ್ಡದ ಬಸದಿ ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ

## ಶ್ರೀಮುಖ ಪತ್ರಿಕೆ

ಸ್ವಸ್ತಿಶ್ರೀ ಶ್ರೀಮದ್ರಾಯರಾಜಗುರು ಭೂಮಂಡಲಾಚಾರ್ಯವರ್ಯ, ಮಹಾವಾದವಾದೀಶ್ವರರಾಯವಾದಿಪಿತಾಮಹ ಸಕಲವಿದ್ವಜ್ಜನಸಾರ್ವಭೌಮಾದ್ಯನೇಕಾನ್ವರ್ಥ ಬಿರುದಾವಳಿ ವಿರಾಜಮಾನರುಂ, ಶ್ರೀಮದ್‌ಕುಂದಕುಂದಾನ್ವಯ–ಸರಸ್ವತೀಗಚ್ಛ ಪದ್ಮಾವತೀದೇವೀಲಬ್ಧವರಪ್ರಸನ್ನರುಂ, ಉತ್ತರಮಧುರಾಧೀಶ್ವರ ಜಿನದತ್ತರಾಯ ಜೀವರಕ್ಷಾಪಾಲಕರುಂ, ಕಲಿಕುಂಡಯಂತ್ರಾರಾಧಕರುಂ, ಸುವರ್ಣಕಲಶಪ್ರತಿಷ್ಠಾಪನಾಚಾರ್ಯರುಂ, ಶ್ರೀ ಜಿನಮತಕಮಲವನ ಹಂಸಾಯಮಾನರುಂ, ಶ್ರೀಮನ್ನಿಜಘಟಿಕಸ್ಥಾನ ಡಿಳ್ಳಿ, ಮಲಯಾದ್ರಿ, ವಿಜಯನಗರ, ವರಂಗ, ಪಟ್ಟಪೊಂಬುಚ್ಚ ಚತುಃಸ್ಸಿದ್ಧಸಿಂಹಾಸನಾಧೀಶ್ವರರುಂ, ಶ್ರೀಮದ್ ಸಿದ್ಧಾಂತಕೀರ್ತಿ ಭಟ್ಟಾರಕಸ್ವಾಮಿಪಟ್ಟಾಂಭೋಜದಿವಾಕರರಾಯಮಾನರುಂ, ಶ್ರೀ ವಿದ್ಯಾನಂದಸ್ವಾಮಿ, ಪಟ್ಟಾಂಭೋಜ ದಿವಾಕರರುಂ,

WWW.HOMBUJAPADMAVATI.ORG

### ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ
### ಶ್ರೀ ಶ್ರೀ ಶ್ರೀಮದ್ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ
### ಮಹಾಸ್ವಾಮೀಜಿಯವರು ಕಳುಹಿಸಿರುವ ನಿರೂಪ



ಧರ್ಮಬಂಧುಗಳೇ,

ಶ್ರೀಕ್ಷೇತ್ರ ಹೊಂಬುಜದ ಪ್ರಾಚೀನವಾದ ಗುಡ್ಡದ ಬಸದಿಯಲ್ಲಿ ನವೀಕರಣ ಯೋಜನೆಯಂತೆ ತ್ರಿಕೂಟ ಬಸದಿಯ ಭಗವಾನ್ ಶ್ರೀ 1008 ಪಾರ್ಶ್ವನಾಥ ತೀರ್ಥಂಕರ, ಭಗವಾನ್ ಶ್ರೀ 1008 ಶಾಂತಿನಾಥ ತೀರ್ಥಂಕರ ಪಂಚಕಲ್ಯಾಣ ಹಾಗೂ ಭಗವಾನ್ ಬಾಹುಬಲಿ ಕೇವಲಿಯ ಪ್ರಾಚೀನ ಪ್ರತಿಮೆಯ ಪ್ರತಿಷ್ಠಾಪನಾ ಮಹೋತ್ಸವ ಜರುಗಲಿದೆ.

ಭಾರತದ ಪ್ರಾಚೀನ ಜೈನ ತೀರ್ಥ ಕ್ಷೇತ್ರಗಳಲ್ಲಿ ಒಂದಾದ ಐತಿಹಾಸಿಕ ಪ್ರಸಿದ್ಧ ಹೊಂಬುಜ ಶ್ರೀಕ್ಷೇತ್ರದಲ್ಲಿ ಜಿನಧರ್ಮ ವತ್ಸಲ ರಾಜ ಜಿನದತ್ತರಾಯನು ರಾಜ್ಯ ಸ್ಥಾಪನೆಮಾಡಿ, ತೀರ್ಥಂಕರ ಭಗವಾನ್ ಪಾರ್ಶ್ವನಾಥ ಸ್ವಾಮಿಯ ಯಕ್ಷಿ ಶ್ರೀ ಪದ್ಮಾವತೀ ದೇವಿಯ ಅನುಗ್ರಹಕ್ಕೆ ಪಾತ್ರನಾಗಿ ಸಮೃದ್ಧ ರಾಜ್ಯವನ್ನು ಕಟ್ಟಿದ ಈ ಸ್ಥಳವು ಐತಿಹಾಸಿಕ ಕ್ಷೇತ್ರವಾಗಿದೆ. ನಮ್ಮ ಪೂರ್ವ ಭಟ್ಟಾರಕ ಪಟ್ಟಾಚಾರ್ಯರಾಗಿದ್ದ ಪರಮಪೂಜ್ಯ ಶ್ರೀ ಅರ್ಹದ್ದಾಸ ದೇವೇಂದ್ರಕೀರ್ತಿ ಸ್ವಾಮಿಗಳು ಹಾಗೂ ನಂತರದಲ್ಲಿ ಪಟ್ಟಾಧೀಶರಾಗಿದ್ದ ಪರಮಪೂಜ್ಯ ಶ್ರೀ ಹೇಮರತ್ನಸಾಗರ ದೇವೇಂದ್ರಕೀರ್ತಿ ಸ್ವಾಮೀಜಿಯವರ ಸದಾಶಯದಂತೆ, ಹಾಗೂ ಈಗಿನ ಶ್ರೀಗಳು ಪಟ್ಟಾಭಿಷೇಕ ಸಂದರ್ಭದಲ್ಲಿ ಶುಭಸಂಕಲ್ಪ ಮಾಡಿದಂತೆ ಪ್ರಾರಂಭಿಸಲಾದ ಅಭಿವೃದ್ಧಿ ಯೋಜನೆಯನ್ನು ಗುಡ್ಡದ ಮೇಲಿರುವ ಬಸದಿಯ ಪರಿಸರದಲ್ಲಿ ಮುಂದುವರಿಸಿಕೊಂಡು, ಶ್ರೀ ಕ್ಷೇತ್ರ ಹೊಂಬುಜ ಜೈನಮಠದ ಭಕ್ತವೃಂದ ಶ್ರಾವಕ–ಶ್ರಾವಕಿಯರ ದಾನ ಸಹಯೋಗದಿಂದ ನವೀಕರಣಗೊಂಡಿದೆ.

ಪ್ರಾಚೀನವಾದ ಭಗವಾನ್ ಶ್ರೀ ಬಾಹುಬಲಿ ಕೇವಲೀ ಸ್ವಾಮಿ ಮೂರ್ತಿಯ ಪುನರ್ ಪ್ರತಿಷ್ಠಾ ಮಹೋತ್ಸವ ಮತ್ತು ಹಿಂದಿನ ಶ್ರೀಗಳವರು ಸ್ಥಾಪನೆ ಮಾಡಿರುವ ಮೂರ್ತಿ ಭಗವಾನ್ ಶ್ರೀ ತೀರ್ಥಂಕರ ಪಾರ್ಶ್ವನಾಥ ಸ್ವಾಮಿ, ಈಗಿನ ಪೂಜ್ಯ ಸ್ವಾಮೀಜಿಯವರ ಅಪೇಕ್ಷೆಯಂತೆ ನೂತನವಾಗಿ ನಿರ್ಮಿಸಿ ಸ್ಥಾಪಿಸಲಾಗಿರುವ ಸರ್ವರಿಗೂ ಶಾಂತಿದಾಯಕ ಭಗವಾನ್ ಶ್ರೀ ತೀರ್ಥಂಕರ ಶಾಂತಿನಾಥ ಸ್ವಾಮಿಯ ಪಂಚಕಲ್ಯಾಣ ಪೂರ್ವಕ ಪ್ರತಿಷ್ಠಾಪನಾ ಮಹೋತ್ಸವವು ನಡೆಯಲಿದೆ. ಇದೇ ಸಂದರ್ಭದಲ್ಲಿ ಧರಣೇಂದ್ರ ಯಕ್ಷ ಮತ್ತು ಪದ್ಮಾವತಿ ಯಕ್ಷಿಯರ ಮೂರ್ತಿಗಳು ನೂತನವಾಗಿ ನಿರ್ಮಿಸಲಾಗಿರುವ ಮಂದಿರದಲ್ಲಿ ಪ್ರತಿಷ್ಠಾಪನೆಯಾಗಲಿವೆ. ನೂತನವಾಗಿ ನಿರ್ಮಿಸಲಾದ ಮಾನಸ್ತಂಭದಲ್ಲಿ ಚತುರ್ಮುಖ ಜಿನಬಿಂಬ ಮತ್ತು ಭಗವಾನ್ ಶ್ರೀ ಶೀತಲನಾಥ ತೀರ್ಥಂಕರರ ಯಕ್ಷ ಶ್ರೀ ಬ್ರಹ್ಮಯಕ್ಷ ಮೂರ್ತಿಯ ಪ್ರತಿಷ್ಠಾಪನೆ ನಡೆಯಲಿದೆ.

ಶ್ರೀ ವಿಜಯನಾಮ ಸಂವತ್ಸರದ ವೈಶಾಖ ಶುದ್ಧ ಪ್ರತಿಪದದಿಂದ ಷಷ್ಠಿಯವರೆಗೆ
ದಿನಾಂಕ: 11–05–2013ರ ಶನಿವಾರದಿಂದ ದಿನಾಂಕ: 16–05–2013 ಭಾನುವಾರದ ವರೆಗೆ ಜರುಗಲಿರುವುದು.

## ಕಾರ್ಯಕ್ರಮಗಳು

| ದಿನಾಂಕ: 10–05–2013ನೇ<br>ಶುಕ್ರವಾರ ವೈಶಾಖ ಶುದ್ಧ ಪ್ರತಿಪದ | ವೈಶಾಖ ಶುದ್ಧ ಬಿದಿಗೆ<br>ದಿನಾಂಕ: 11–05–2013ನೇ ಶನಿವಾರ | ವೈಶಾಖ ಶುದ್ಧ ತದಿಗೆ<br>ದಿನಾಂಕ: 12–05–2013ನೇ ಭಾನುವಾರ |
|---|---|---|
| ಪಂಚಕಲ್ಯಾಣದ ಪೂರ್ವ<br>ಶುದ್ಧೀಕರಣ ಪೂಜೆಗಳು, | ಪ್ರಾತಃಕಾಲ ಗಂಟೆ 8.30 ಕ್ಕೆ ಶ್ರೀ ಮಠದ ಸಮೀಪದ ಅತೀ ಪ್ರಾಚೀನವಾದ ಜಿನಮಂದಿರದಲ್ಲಿ ನಿತ್ಯ ವಿಧಿ–ವಿಧಾನ ಸಹಿತ<br>ಭಗವಾನ್ ಶ್ರೀ ಪಾರ್ಶ್ವನಾಥ ತೀರ್ಥಂಕರರಿಗೆ ನವಕಲಶಾಭಿಷೇಕ, ಪಂಚಾಮೃತ ಅಭಿಷೇಕ, ಕಲಿಕುಂಡ ಯಂತ್ರಾರಾಧನೆ ಮತ್ತು<br>ಯಕ್ಷಿ ಶ್ರೀ ಪದ್ಮಾವತಿದೇವಿಗೆ ಷೋಡಶೋಪಚಾರ ಪೂಜೆ<br>**ನೂತನ ಬಸದಿಯಲ್ಲಿ**<br>ಗಂಟೆ: 12–46 ರಿಂದ 02–02 ಗಂಟೆಯ ತನಕ ನಡೆಯುವ ಸಿಂಹ ಲಗ್ನದಲ್ಲಿ ಪೂಜಾ ಸಂಕಲ್ಪ, ನಾಂದಿಮಂಗಲ,<br>ಕಂಕಣ ಬಂಧನ, ಧ್ವಜಾರೋಹಣ, ಗಂಟೆ 03–00 ರಿಂದ ಯಾಗಮಂಡಲಾರಾಧನೆ, ಜಲಯಾತ್ರಾ ಮಹೋತ್ಸವ,<br>ರಾತ್ರಿ ಗರ್ಭಾವತರಣ ಕಲ್ಯಾಣ, ಮತ್ತು ಸಾಂಸ್ಕೃತಿಕ ಕಾರ್ಯಕ್ರಮ | ನೂತನ ಬಸದಿಯಲ್ಲಿ<br>ಪ್ರಾತಃಕಾಲ<br>ಜನ್ಮಕಲ್ಯಾಣ, ಜನ್ಮಾಭಿಷೇಕ<br>ಮಧ್ಯಾಹ್ನ : ರಾಜ್ಯಾಭಿಷೇಕ,<br>ದೀಕ್ಷಾ ಕಲ್ಯಾಣ<br>ರಾತ್ರಿ : ಸಾಂಸ್ಕೃತಿಕ ಕಾರ್ಯಕ್ರಮ |

| ವೈಶಾಖ ಶುದ್ಧ ಅಕ್ಷಯ ತದಿಗೆ<br>ದಿನಾಂಕ: 13–05–2013ನೇ ಸೋಮವಾರ | ವೈಶಾಖ ಶುದ್ಧ ಚೌತಿ<br>ದಿನಾಂಕ: 14–05–2013ನೇ ಮಂಗಳವಾರ | ವೈಶಾಖ ಶುದ್ಧ ಪಂಚಮಿ<br>ದಿನಾಂಕ: 15–05–2013ನೇ ಬುಧವಾರ | ವೈಶಾಖ ಶುದ್ಧ ಷಷ್ಠಿ<br>ದಿನಾಂಕ: 16–05–2013ನೇ ಗುರುವಾರ |
|---|---|---|---|
| ನೂತನ ಬಸದಿಯಲ್ಲಿ ಪ್ರಾತಃಕಾಲ ಬ್ರಾಹ್ಮೀ ಮೂಹೂರ್ತದಲ್ಲಿ ಕೇವಲಜ್ಞಾನ<br>ಕಲ್ಯಾಣ ಮತ್ತು ಪ್ರತಿಷ್ಠೆ, ಪ್ರಾತಃ ಗಂಟೆ 06–07ಕ್ಕೆ ಅಕ್ಷಯ ತದಿಗೆಯ<br>ಸೂರ್ಯೋದಯದ ಶುಭ ಮಂಗಳಮುಹೂರ್ತದಲ್ಲಿ<br>ಪ್ರತಿಷ್ಠಿತ ಮೂರ್ತಿಗಳ ದಿವ್ಯ ದರ್ಶನ,<br>ಗಂಟೆ 07–00 ರಿಂದ ಸಮವಸರಣ ಪೂಜೆ,<br>ಗಂಟೆ 09–30 ಕ್ಕೆ ಲಘು ಸಿದ್ಧಚಕ್ರ ಆರಾಧನಾ ಪೂರ್ವಕ ನಿರ್ವಾಣಕಲ್ಯಾಣ,<br>ಪ್ರಾತ: ಗಂಟೆ 10–30ಕ್ಕೆ 1008 ಕಳಶಾಭಿಷೇಕ ಪೂರ್ವಕ<br>ಪಂಚಾಮೃತ ಅಭಿಷೇಕ<br>ರಾತ್ರಿ :– ಸಾಂಸ್ಕೃತಿಕ ಕಾರ್ಯಕ್ರಮ | ಪ್ರಾತಃಕಾಲ ಗಂಟೆ 8.30ಕ್ಕೆ<br>ಶಾಂತಿನಾಥ ವಿಧಾನ<br>10–30ಕ್ಕೆ 1008 ಕಳಶಗಳಿಂದ<br>ಮಹಾಭಿಷೇಕ, ಪಂಚಾಮೃತ ಅಭಿಷೇಕ,<br>ಸಂಜೆ 06–00ಕ್ಕೆ<br>ಧಾರ್ಮಿಕ ಸಭೆ<br>ರಾತ್ರಿ : ಸಾಂಸ್ಕೃತಿಕ ಕಾರ್ಯಕ್ರಮ | ಪ್ರಾತಃಕಾಲ ಗಂಟೆ 8.30 ಕ್ಕೆ<br>ಕಲ್ಯಾಣ ಮಂದಿರ ವಿಧಾನ<br>ಗಂಟೆ 10–30ಕ್ಕೆ<br>1008 ಕಳಶಗಳಿಂದ ಮಹಾಭಿಷೇಕ,<br>ಪಂಚಾಮೃತ ಅಭಿಷೇಕ,<br>ಸಂಜೆ 06–00ಕ್ಕೆ<br>ಧಾರ್ಮಿಕ ಸಭೆ<br>ರಾತ್ರಿ : ಸಾಂಸ್ಕೃತಿಕ ಕಾರ್ಯಕ್ರಮ | ಪ್ರಾತಃಕಾಲ ಗಂಟೆ 8.30 ಕ್ಕೆ<br>ಜಿನಗುಣ ಸಂಪತ್ತಿ ವಿಧಾನ<br>ಗಂಟೆ 11–30ಕ್ಕೆ ಧಾರ್ಮಿಕ ಸಭೆ<br>ಮಧ್ಯಾಹ್ನ ಗಂಟೆ 03–00ಕ್ಕೆ<br>1008 ಕಳಶಗಳಿಂದ ಮಹಾಭಿಷೇಕ<br>ಪಂಚಾಮೃತ ಅಭಿಷೇಕ<br>**ಧ್ವಜಾವರೋಹಣ**<br>ಸಂಘ ಪೂಜೆ<br>ರಾತ್ರಿ : ಸಾಂಸ್ಕೃತಿಕ ಕಾರ್ಯಕ್ರಮ |

WWW.HOMBUJAPADMAVATI.ORG

ಯಜಮಾನ

**ಪಾರ್ಶ್ವನಾಥಸ್ವಾಮಿ**
ಮೂರ್ತಿಯ ದಾನಿಗಳಾದ
**ಸ್ವ॥ ಚಾಂದ್ ಮಲ್ ಸರಾವಗಿ**
**ಪರಿವಾರ, ಗೌಹಾಟಿ**

ಸೌಧರ್ಮೇಂದ್ರ



ಶ್ರೀ ನವೀನ್ ಜೈನ್–ಶ್ರೀಮತಿ ರೀತು ಜೈನ್, ಗುಡಗಾವ್

ಈಶಾನೇಂದ್ರ



ಶ್ರೀ ಸುಮನ್–ಶ್ರೀಮತಿ ಮಾಯಾ ಜೈನ್, ಚೆನ್ನೈ

ಸನತ್ಕುಮಾರೇಂದ್ರ



ಶ್ರೀ ಪ್ರಭಾಕರ್ ಗೋಗಿ–ಶ್ರೀಮತಿ ನಂದಾ ಗೋಗಿ, ಶಿವಮೊಗ್ಗ

ಮಹೇಂದ್ರ



ಶ್ರೀ ಪ್ರಕಾಶ್ ಚಂದ್ ಜೈನ್–ಶ್ರೀಮತಿ ಶಕುಂತಲ ಜೈನ್, ಭದ್ರಾವತಿ

**ಪ್ರತಿಷ್ಠಾಚಾರ್ಯರು :**
ಶ್ರೀ ವರ್ಧಮಾನ ಇಂದ್ರ,
ಬಜಗೋಳಿ, ಕಾರ್ಕಳ
**ಶ್ರೀ ಹೊಂಬುಜ ಕ್ಷೇತ್ರದ**
**ಸೀಮೆಯ ಪುರೋಹಿತ ವೃಂದ**

**ಸಂಗೀತಗಾರರು :**
ವಿದ್ಯಾಸಾಗರ ಬಡಬಡೆ
ಜಯಸಿಂಗಪುರ, ಮಹಾರಾಷ್ಟ್ರ

ಕ್ಷೇತ್ರದ ಎಲ್ಲಾ ಬಸದಿಗಳಲ್ಲಿ ವಿಶೇಷ ಪೂಜೆ ಮತ್ತು ಆರಾಧನೆಗಳು ನಡೆಯಲಿವೆ. ತ್ಯಾಗಿಗಳಿಂದ ಪ್ರವಚನ, ವಿದ್ವಾಂಸರ ಭಾಷಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.
ಈ ಮೇಲಿನಂತೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ಪಂಚಕಲ್ಯಾಣ ಮಹೋತ್ಸವದಲ್ಲಿ ಧರ್ಮಬಂಧುಗಳಾದ ತಾವೆಲ್ಲರೂ ಭಾಗವಹಿಸಿ ಪುಣ್ಯಭಾಗಿಗಳಾಗಬೇಕಾಗಿ ಅಪೇಕ್ಷಿಸುತ್ತೇವೆ.

**ವಿ.ಸೂ.:** ಈ ಕಾರ್ಯಕ್ರಮಗಳಿಗೆ ಆಗಮಿಸುವವರಿಗೆ ಉಪಾಹಾರ ಮತ್ತು ಭೋಜನದ ವ್ಯವಸ್ಥೆ ಇರುತ್ತದೆ. ಮಹಾಮಸ್ತಕಾಭಿಷೇಕ ಕಳಶಗಳನ್ನು ಪಡೆಯಲಿಚ್ಛಿಸುವವರು ಕಾರ್ಯಾಲಯದಲ್ಲಿ ವಿಚಾರ ವಿನಿಮಯ ಮಾಡಿಕೊಳ್ಳಬಹುದು. ವಸತಿ ಸೌಕರ್ಯಕ್ಕೆ ಪೂರ್ವ ಸೂಚನೆ ಅಗತ್ಯ.

**ಪಂಚಕಲ್ಯಾಣ ಸಮಿತಿಯ ಪರವಾಗಿ**

**ಶ್ರೀ ಡಿ. ಸುರೇಂದ್ರ ಕುಮಾರ್**
ಅಧ್ಯಕ್ಷರು

**ಶ್ರೀ ಎಸ್. ಜಿತೇಂದ್ರ ಕುಮಾರ್**
ಕಾರ್ಯಾಧ್ಯಕ್ಷರು

**ಶ್ರೀ ಜಯವರ್ಮರಾಜ ಬಲ್ಲಾಳ್**
ಉಪಾಧ್ಯಕ್ಷರು

ಉಪಸಮಿತಿಗಳ ಸಂಚಾಲಕರು,
ಪದಾಧಿಕಾರಿಗಳು ಹಾಗೂ ಸದಸ್ಯರು

**ಆಡಳಿತಾಧಿಕಾರಿ**
ಶ್ರೀ ಹೊಂಬುಜ ಜೈನಮಠ, ಅಂಚೆ: ಹುಂಚ –577 436,
ಹೊಸನಗರ ತಾಲೂಕು, ಶಿವಮೊಗ್ಗ ಜಿಲ್ಲೆ, ದೂರವಾಣಿ: 08185–262722